ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

ಕೆ.ಆರ್.ನಗರ

ಒಎಸ್ 285/2013

ಪಿಡಬ್ಲ್ಯೂ 1

ಸಾಕ್ಷಿಯನ್ನು ದಿನಾಂಕ 29.02.2024 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ ಎಮ್.ಸಿ.ಎಸ್. ವಕೀಲರಿಂದ ಪ್ರತಿವಾದಿ ಪರ ವಕೀಲರುಃ

ನಾನು ಕೆ.ಆರ್.ನಗರದಲ್ಲಿ ಸುಮಾರು 10 ವರ್ಷಗಳಿಂದ ವಾಸವಿದ್ದೇನೆ. 2 ನೇ ಪ್ರತಿವಾದಿ ಹಾಗೂ ನನ್ನ ಮಾವ ಕೆಂಚಗೌಡ ಕೆಸ್ತೂರುಕೊಪ್ಪಲಿನಲ್ಲಿ ವಾಸವಿದ್ದರು. ನನ್ನ ಮಾವ ಬದುಕಿದ್ದ ಸಮಯದಲ್ಲಿ ನಮ್ಮ ಮನೆಗೆ ಬಂದು ಚೆನ್ನಾಗಿ ಮಾತನಾಡುತ್ತಿದ್ದರು. ಅವರು ಆರೋಗ್ಯವಾಗಿದ್ದರು. ಅವರು ಓಡಾಡುತ್ತಿದ್ದರು. ಅವರು ಮನೆಯ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು. ಮನೆಯ ವ್ಯವಹಾರವನ್ನು ನಮ್ಮ ಮಾವ ನೋಡಿಕೊಳ್ಳುತ್ತಿದ್ದರು. ಅವರು ಸ್ವಲ್ಪ ವಿದ್ಯಾವಂತರಾಗಿದ್ದರು, ಅವರಿಗೆ ಓದಲು ಬರುತ್ತಿತ್ತು. ಅವರು ಟೌನ್ ಗೆ ಬರುತ್ತಿದ್ದರು.

2. ದಾವಾ ಸ್ವತ್ತಿನಲ್ಲಿ ಕೆಂಚೇಗೌಡರಿಗೂ ಒಂದು ಭಾಗ ಬರಬೇಕಿತ್ತು ಎಂದರೆ ಅವರು ಬದುಕಿದ್ದರೆ ಭಾಗ ಇತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಕೆಸ್ತೂರುಕೊಪ್ಪಲಿನಲ್ಲಿ ವಾಸವಿರುವ 6 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಮಗನಾಗಿದ್ದು ಕೆಂಚೇಗೌಡರವರಿಗೆ ಮೊಮ್ಮಗನಾಗಬೇಕು ಎಂದರೆ ಸರಿ. ನಾವು ಕೆ.ಆರ್.ನಗರದಲ್ಲಿ ಇರುವಾಗ ಕೆಂಚೇಗೌಡರವರು 6 ನೇ ಪ್ರತಿವಾದಿ ಮನೆಯಲ್ಲಿ ಊಟ ಮಾಡುತ್ತಿದ್ದರು ಎಂದರೆ ಒಟ್ಟು ಕುಟುಂಬದಲ್ಲೇ ಮನೆ ಇದ್ದು, ನಾವು ಹೋಗಿ ಬಂದು ಮಾಡುತ್ತಿದ್ದೇವು ಎಂದು ಸಾಕ್ಷಿ ನುಡಿಯುತ್ತಾರೆ.

3. ನನ್ನ ಗಂಡ ಹಾಗೂ 2 ನೇ ಪ್ರತಿವಾದಿ ನಡುವೆ ಮೌಖಿಕವಾಗಿ ದಾವಾ ಆಸ್ತಿಗಳು ಭಾಗವಾಗಿಲ್ಲ. ದಾವಾ ಐಟಂ ನಂ.4 ಮತ್ತು 7 ನನ್ನ ಮಾವರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ಸಲ್ಲಿಸಿರುವ ತಕರಾರು ಪತ್ರವನ್ನು ನಾನು ತಿಳಿದುಕೊಂಡಿದ್ದೇನೆ. ದಾವಾ ಐಟಂ ನಂ.4 ರಲ್ಲಿ 4 ಎಕರೆ 28 ಗುಂಟೆ ಪೈಕಿ ಒಂದು ಎಕರೆ ಜಮೀನನ್ನು ನನ್ನ ಮಾವ

6 ನೇ ಪ್ರತಿವಾದಿಗೆ ದಿಃ 03.03.2003 ರಲ್ಲಿ ನೊಂದಾಯಿತ ವಿಲ್ಲು ಬರೆದಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.7 ರ ಸರ್ವೆ ನಂಬರ್ 576/3 ರಲ್ಲಿ 13 ಗುಂಟೆ ನನ್ನ ಮಾವ 6 ನೇ ಪ್ರತಿವಾದಿಗೆ ದಿಃ 03.03.2003 ರಲ್ಲಿ ನೊಂದಾಯಿತ ವಿಲ್ಲು ಬರೆದಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.576/3 ರಲ್ಲಿ ಮೊದಲು 13 ಗುಂಟೆ ಇದ್ದು ದುರಸ್ತಿ ನಂತರ 11 ಕಾಲು ಗುಂಟೆಯಾಗಿದೆ ಅಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿರುವುದಿಲ್ಲ. ಸ.ನಂ.576/3 ರ 11 ಕಾಲು ಗುಂಟೆ ಜಮೀನಿನ ಭಾಗದಲ್ಲಿ ಕಾಲುವೆ ಹೋಗಿದೆ ಎಂದರೆ ಸರಿ.

4. ನನ್ನ ಮಾವ 2006 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ತದನಂತರ ವಿಲ್ ಪತ್ರದ ಆಧಾರದ ಮೇಲೆ ಮೇಲೆ ಹೇಳಿದ ವಿಲ್ ನಲ್ಲಿ ನಮೂದು ಇರುವ ಜಮೀನನ್ನು 6 ನೇ ಪ್ರತಿವಾದಿ ಉಳುತ್ತಿದ್ದಾರೆ ಎಂದರೆ ಒಟ್ಟು ಕುಟುಂಬದಲ್ಲೇ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ವಿಲ್ಲು ಮಾಡಿರುವ ಆಸ್ತಿ ಕೆಂಚೇಗೌಡರ ಹಕ್ಕಿಗೆ ಒಳಪಟ್ಟ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ಕೆಂಚೇಗೌಡರವರ ಸಂಪೂರ್ಣ ಹಕ್ಕಿಗೆ ಒಳಗಾಗಿದ್ದ ಕಾರಣ ಹಾಗೂ ಕೆಂಚೇಗೌಡರನ್ನು 6 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದ ಕಾರಣ ಅವರ ಹೆಸರಿಗೆ ವಿಲ್ಲು ಮಾಡಲಾಗಿದೆ ಎಂದರೆ ಸರಿಯಲ್ಲ.

5. ದಾವಾ ಸ್ವತ್ತುಗಳಲ್ಲಿ ಈಗಾಗಲೇ ನಾವು ಭಾಗ ಪಡೆದು ಪ್ರತ್ಯೇಕವಾಗಿ ಕೆ.ಆರ್.ನಗರದಲ್ಲಿ ವಾಸವಿದ್ದೇವೆ ಎಂದರೆ ಸರಿಯಲ್ಲ. 1998 99 ರಲ್ಲಿ 2 ನೇ ಪ್ರತಿವಾದಿ, ನನ್ನ ಗಂಡ ಕೃಷ್ಣೇಗೌಡ ಮತ್ತು ನನ್ನ ಮಾವ ಕೆಂಚೇಗೌಡ ಆಸ್ತಿಗಳನ್ನು ವಿಭಾಗ ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಭಾಗಕ್ಕೆ ಬಂದಿರುವ ಕೆಲವು ಆಸ್ತಿಗಳನ್ನು ಖಾತೆ ಮಾಡಿಸಿಕೊಂಡಿದ್ದು, ಉಳಿದ ಆಸ್ತಿಗಳನ್ನು ಖಾತೆ ಮಾಡಿಸಿಕೊಳ್ಳದೇ ಅದರಲ್ಲಿ ಉಳುಮೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಕೆಂಚೇಗೌಡರಿಗೆ ಬಂದಂತ ಭಾಗವನ್ನು 6 ನೇ ಪ್ರತಿವಾದಿಗೆ ವಿಲ್ಲು ಮಾಡಿದ್ದಾರೆ ಎಂದರೆ ಸರಿಯಲ್ಲ.

6. 2 ನೇ ಪ್ರತಿವಾದಿ ಅವರಿಗೆ ಬಂದಂತಹ ಭಾಗದಲ್ಲಿ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತು ಆದರೆ ಅದು ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. 2 ನೇ ಪ್ರತಿವಾದಿ ತನಗೆ ಬಂದಂತಹ ಕೆಲವು ಸ್ವತ್ತುಗಳನ್ನು 5 ನೇ ಪ್ರತಿವಾದಿರವರಿಗೆ ಈ ಹಿಂದೆಯೇ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮೌಖಿಕವಾಗಿ ಸ್ವತ್ತುಗಳು ವಿಭಾಗವಾಗಿರುವ ಕಾರಣ 1 ನೇ ಐಟಂ 2 ನೇ ಪ್ರತಿವಾದಿಯಿಂದ 5 ನೇ ಪ್ರತಿವಾದಿ ಕ್ರಯಕ್ಕೆ ಸ್ವತ್ತುಗಳನ್ನು ಪಡೆಯುವ ಸಮಯದಲ್ಲಿ ನನ್ನ ಗಂಡ ಹಾಗೂ ನನ್ನ ಮಾವನ ಸಹಿ ಪಡೆದಿಲ್ಲ ಎಂದರೆ

ಸರಿಯಲ್ಲ. ವಿಲ್ಲಿನಲ್ಲಿರುವ ಆಸ್ತಿಗಳನ್ನು ಕಬಳಿಸಲು ನಾನು 6 ನೇ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಈಗಾಗಲೇ ವಿಭಾಗವಾಗಿರುವ ಕಾರಣ ದಾವಾ ಆಸ್ತಿಯಲ್ಲಿ ನನಗೆ ಭಾಗ ಕೇಳಲು ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.4 ಮತ್ತು 7 ರಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ 6 ನೇ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ